ಇದನ್ನು ಕೇಳಿ ವಿಚಲಿತಳಾದ ದ್ಯಾವಕ್ಕ 'ಏನಣ್ಣ ಇಂಗಂತೀಯಾ, ಮನ್ನೆ ಬರಗಾಲ ನೋಡ್ಲಿಕ್ಕೆ ಮುಖ್ಯಮಂತ್ರಿ ಇಮಾನದಾಗೆ ಬಂದು ಹೋಗಿದಾರೆ, ಸ್ಯಾನೆ ದುಡ್ಡು ಬತ್ತದೇ ಅಂತ ಹೇಳ್ತಾವರೆ. ನಿನಗೆ ಸರಿಯಾಗಿ ತಿಳಿದಿಲ್ಲ ಬಿಡು' ಎಂದು ತನ್ನ ತಲೆ ಮೇಲಿನ ಬುತ್ತಿಗಂಟನ್ನೇ ಎತ್ತಿ ಕುಕ್ಕಿ ಇಟ್ಟುಕೊಳ್ಳುತ್ತಾ ಅವನ ಮೇಲಿನ ಸಿಟ್ಟನ್ನ ತೋರ್ಪಡಿಸಿದಳು.

ಹೀಗೆ ತಿಂಗಳುಗಳು ಕಳೆದು ಚುನಾವಣೆ ಹತ್ತಿರ ಬರ್ತಿದಾವೆ ಎಂಬ ನೆಪ ಮಾಡಿಕೊಂಡು, ಸರ್ಕಾರವು ಪಂಚಾಯಿತಿಗೆ ಇಷ್ಟು ಮನೆ ಮಂಜೂರು ಮಾಡಬೇಕೆಂದು ತೀರ್ಮಾನಿಸಿತು. ದ್ಯಾವಕ್ಕಳ ಆಸೆ ನೆರವೇರುವ ಕಾಲ ಹತ್ತಿರ ಬಂತು. ಹಟ್ಟಿಯ ದೇವರಾದ ಚಿತ್ರದೇವರ ಜಾತ್ರೆ ಹತ್ತಿರ ಬಂದುದರಿಂದ ಆ ದೇವರ ಹುಲ್ಲು ಹಾಸಿನ ಗುಡಿಗೆ ಹೊಸ ಹುಲ್ಲು ತಂದು ಹೊದಿಸಿ ಭದ್ರಪಡಿಸಲು, ಅದರ ಸುತ್ತಲಿನ ಪೌಳಿಯನ್ನು ಸ್ವಚ್ಛಗೊಳಿಸಲು ಮನೆಗೊಂದಾಳು ಬಂದು ದೇವರ ಕೆಲಸ ಮಾಡಬೇಕೆಂದು ಹಟ್ಟಿ ಯಜಮಾನರು ತೀರ್ಮಾನಿಸಿದರು. ಹಟ್ಟಿಯ ಜನ ಆ ದಿನ ಮನೆಗೊಬ್ಬರಂತೆ ಸೇರಿಕೊಳ್ಳುವಂತೆ ದ್ಯಾವಕ್ಕನೂ ಆಕೆಯ ಮಗನೂ ದೇವರ ಗುಡಿಯ ಕಾರ್ಯದಲ್ಲಿ ಕೈಜೋಡಿಸಿದರು. ಅಂತಹ ಸಂದರ್ಭದಲ್ಲಿಯೇ ಮಾರಣ್ಣನ ತಮಟೆಯ ಶಬ್ದ ಹಟ್ಟಿಯ ಮುಂದಿನಿಂದ ಹಾದು ಬರುತ್ತಿತ್ತು. ಆ ಶಬ್ದ ದೇವರ ಪೌಳಿಯವರೆಗೂ ಸಾಗಿ ಬರುವವರೆಗೂ ಕಾಯದೇ ಕೆಲಸ ಮಾಡುವುದನ್ನೇ ಬಿಟ್ಟು ದ್ಯಾವಕ್ಕ ಅದಕ್ಕೆ ಎದುರಾಗಿ ಓಡಿದಳು. ಮಾರಣ್ಣನು ನಿಂತು 'ಗೌರ್ಮೆಂಟ್‌ನಿಂದ ಮನೆ ಬಂದಿದಾವೆ ಅಂತೆ... ನಾಳೆ ಹೊತ್ತಾರೆ ಹನ್ನೊಂದು ಗಂಟೆಗೆ ಚಾವಡಿ ಹತ್ತಿರ ಗ್ರಾಮಸಭೆ ಐತೆ. ಎಲ್ರೂ ಬರ್ರಪ್ಪೋ ಬರ್ರಿ...' ಎಂದು ಹೇಳಿದ. ಈ ವಿಷಯ ಕೇಳಿದ ದ್ಯಾವಕ್ಕನಿಗೆ ಮೈಯಲ್ಲಿ ಹೊಸರಕ್ತ ಸಂಚಾರವಾದಂತಾಯ್ತು.

'ಗೌರ್ಮೆಂಟ್‌ನಿಂದ ಮನೆ ಬಂದಿದಾವ ಮಾರಣ್ಣ, ನಮ್ಮ ಗುಡಿಸಲು ಹಾಳಾಗದೆ, ಅದಕ್ಕೆ ನಾನೊಂದು ಮನೆ ಬರೆಸಿಕೋತಿನಿ' ಎಂದು ಮಾರಣ್ಣನ ಹತ್ತಿರ ಹೇಳತೊಡಗಿದಳು.

'ನಂದೇನಿದ್ದರು ಡಂಗೂರ ಹೊಡೆಯುವುದು ಕಣಕ್ಕ. ಮನೆ ಕೊಡೋದು ಪಂಚಾಯಿತೋರು, ಡಂಗೂರ ಹೊಡಿಯೋ ಕಾಸು ಇಸ್ಕೋಳ್ಳೋಕೆ ಎಂಟು ದಿನ ಆಗ್ತದೆ, ಇನ್ನು ನಿನಗೆ ಮನೆ ನಾನೆಲ್ಲಿ ತಂದುಕೊಡಲಿ' ಎಂದು ಮಾರಣ್ಣನು ತನ್ನ ಕೂಲಿ ಬಗ್ಗೆ ವದರಿಕೊಳ್ಳುತ್ತಾ ಮುಂದಕ್ಕೆ ಸಾಗಿದ.

ಅಲ್ಲಿ ಗುಡಿ ಮುಂದೆ ನೆರೆದವರಿಗೆಲ್ಲಾ ಗ್ರಾಮಸಭೆಯಲ್ಲಿ ಗೌರ್ಮೆಂಟ್ ಮನೆ ಪಡೆಯುವುದರ ಬಗ್ಗೆ ಹೇಳತೊಡಗಿದಳು. ಅಲ್ಲಿದ್ದ ಕೆಲವರು 'ಅಯ್ಯೋ... ನೀನು ಮನೆ ಕೇಳಿದೇಟಿಗೆ ಸುಮ್ನೆ ಕೊಟ್ಟುಬಿಡ್ತಾರಾ? ಅದಕ್ಕೆಲ್ಲಾ ರೆಕ್ಮಂಡೇಸನ್ ಬೇಕು, ಎಮ್ಮೆಲ್ಲೆ, ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಹೇಳಿದವರಿಗೆ ಮನೆಕೊಡ್ತಾರೆ. ನೀನು ಕೇಳಿದೇಟಿಗೆ ಕೋಡ್ತಾರಾ? ಟೈಮಾಗುತ್ತೆ ಬೇಗ ಬೇಗ ಗುಡಿ ಕೆಲಸ ಮಾಡು, ಇನ್ನು ಕೆಲಸ ಬಾಳ ಐತೆ' ಎಂದರು. 'ನಿನ್ನ ಗುಡಿಸಲಿಗೆ ನಿನ್ನ ಗಂಡನ ಕೈಲಿ ಒಂದಿಷ್ಟು ಹುಲ್ಲು, ಗರಿ ತರಿಸಿ ಹೊದಿಸಿಕೋ. ಗೌರ್ಮೆಂಟಿನೋರು ಮನೆ ಕೊಟ್ಟಾರು... ನೀನು ಕಟ್ಟಿಕೊಂಡಂಗೆ! ಅಷ್ಟಕ್ಕೂ ಮನೆ ಕಟ್ಟೋಕೆ ದುಡ್ಡು ಎಲ್ಲಿಂದ ತರ್ತೀಯಾ?' ಹಟ್ಟಿ ಯಜಮಾನ ಈರಣ್ಣ ಕೇಳಿದ. ಅಲ್ಲೇ ಇದ್ದ ಬಿಳಿಲುಂಗಿ ಚಿಕ್ಕಣ್ಣ 'ನಿನ್ನ ಗುಡಿಸಲು ಚೆನ್ನಾಗೆ ಐತೆ. ಮುಂದಿನ ಸಲ ಬರಸ್ಕ್ಯ. ಈ ಸಲ ಆಗಲೇ ಮುಗಿದು ಹೊಗ್ಯವಾ' ಎಂದ.

ಇವರಿಬ್ಬರ ಮಾತಿನಿಂದ ದ್ಯಾವಕ್ಕನ ಮನಸ್ಸು ಭುಗಿಲೆದ್ದಿತು. 'ಈಗ ಇನ್ನೂ ನಾಳೆ ಗ್ರಾಮಸಭೆ ಐತೆ ಅಂತ ಹೇಳ್ದ, ಆಗಲೇ ಮುಗಿದ್ವಾ? ನನ್ನ ಗುಡಿಸಲು ಅರಮನೆ ಅಂಗೈತಾ? ಮಣ್ಣು ಮೆತ್ತಿದ್ದು ಉದುರಿ ಬೀಳಾಕತ್ತೈತೆ. ಗಳ ಊಳ ಹಿಡಿದು ರವುದೇ ಪುಡಿ ಮನೆ ತುಂಬಾ ಬೀಳ್ತಾಯಿದೆ. ಗೌರ್ಮೆಂಟ್‌ದು ಸ್ವಲ್ಪ ದುಡ್ಡು ಬಂದ್ರೆ ಅದಕ್ಕೆ ಸಾಲ ಮಾಡಿ ಇನ್ನೊಂದಿಷ್ಟು ಸೇರಿಸಿ ಸಿಮೆಂಟ್ ಶೀಟಿನ ಮನೆ ಕಟ್ಟಿಕೊಳ್ಳಬೇಕು ಅಂತ ಇದೀನಿ, ನಾಳೆ ನಾನೂ ಕೇಳ್ತಿನಿ, ಅದೇಂಗ ಮುಗಿದು ಹೋಗಿದಾವೆ. ಈ ಸಾರಿ ನಾನು ಬಿಡೋದಿಲ್ಲ. ನನಗೆ ಮನೆ ಬೇಕೇ ಬೇಕು' ಎಂದು ಓಣಿಯೆಲ್ಲ ಕೇಳೋ ಹಂಗೆ ಬಾಯಿ ಮಾಡುತ್ತಾ ಮನೆಗೆ ಬಂದಳು.

ಅಲ್ಲಿಗೆ ಕೂಲಿ ಕರೆಯಲಿಕ್ಕೆ ಬಂದಿದ್ದ ಊರ ಮುಂದಿನ ರಾಮಣ್ಣ ಈಕೆಯ ಬಾಯಿ ನೋಡಿ, 'ಏನು ದ್ಯಾವಕ್ಕ ನಿನ್ನ ಮಾತು, ನಾಳೆ ನೀರುಳ್ಳಿ ಕಳೆ ತೆಗಿಲಿಕ್ಕೆ ಕೂಲಿಗೆ ಬಾ' ಎಂದ. 'ಇಲ್ಲ ರಾಮಣ್ಣೋ, ನಾಳೆ ಗ್ರಾಮಸಭೆ ಐತೆ. ನಾನು ಗೌರ್ಮೆಂಟ್ ಮನೆ